**ಕವಿತೆ**



**ವಿಕ್ರಮ ವಿಸಾಜಿ**

ಕಲೆ: ಬಸವರಾಜ ಎಸ್. ಕಲೆಗಾರ

# ಜನಪದ ಹಾಡು ಮತ್ತು ಅರಸ



ಅರಸನ ಮೇಲೊಂದು ಶಾಸನ ರಚಿಸಿ
ಊರದಾರಿಯಲಿ ನೆಡಲಾಗಿತ್ತು;
ತ್ರಿಲೋಕವೀರ, ಭುಜಬಲ ಶೂರ, ವೀರಮಾರ್ತಾಂಡ,
ಚಂಡಪ್ರಚಂಡ, ಛಲದಂಕಮಲ್ಲ, ಸಮರದುರಂಧರ,
ಪ್ರತಿಪಕ್ಷ ಸಂಹಾರಕ, ರಾಜಕುಲತಿಲಕ.

ಮಹಾಕಾವ್ಯಗಳಲ್ಲೂ ಅರಮನೆಯ ದಟ್ಟ ವರ್ಣನೆ
ಉಂಗುಷ್ಠದಿಂದ ತಲೆಗೂದಲವರೆಗಿನ ಸೌಂದರ್ಯಕ್ಕೆ
ಸುಂದರ ಕಾವ್ಯಕನ್ನಡಿ. ನೋಡಿದರೆ ಕಣ್ಣಬೆಳಕೇ ಆರಿಹೋಗುವಂತೆ
ಕಿರೀಟ, ರತ್ನಖಚಿತಸಿಂಹಾಸನದ ಹೊಳಪು.

ಒಂದು ದಿನ ಕಾಡಿನಲಿ ಬೇಟೆಗೆ ಬಂದ ಅರಸ
ಮುದುಕಿಯೊಬ್ಬಳ ಕಂಠಕ್ಕೆ ಬೆರಗಾದ
ತೇಲಿಬರುತ್ತಿದ್ದ ಹಾಡಿಗೆ ಕಿವಿಯಾದ;

ಹಾಡೊಳಗೆ ಹಕ್ಕಿಯಿತ್ತು,
ನಕ್ಷತ್ರವಿತ್ತು, ಅಂಗಳದ ಕೋಳಿಯಿತ್ತು,
ಅಂಬಾ ಎನ್ನುವ ಆಕಳಮರಿಯಿತ್ತು,
ಬಚ್ಚಲಮೂಲೆಗೆ ಅರಳಿದ ಸಂಪಿಗೆಯಿತ್ತು,
ಬೀಸುವ ಕಲ್ಲಿತ್ತು, ಕುದಿಯುವ ನುಚ್ಚಿತ್ತು,
ಸೂಲಗಿತ್ತಿಯ ಕೈಚಳಕವಿತ್ತು,
ನಾಟಿವೈದ್ಯನ ಬೇರಿತ್ತು,
ಕಮ್ಮಾರನ ರಸವಿದ್ಯೆಯಿತ್ತು,
ಚಮ್ಮಾರ ಹದಮಾಡಿದ ಚರ್ಮವಿತ್ತು,
ಎಲ್ಲಮ್ಮನ ಭಂಡಾರವಿತ್ತು,
ಬೀರಪ್ಪನ ಪಾದವಿತ್ತು,
ಜೋಗಿಜಂಗಮನ ಹರೆಯುವಿತ್ತು,
ಕೊಳಲ ನಾದವಿತ್ತು,
ಮಾಟಗಾರನ ಮಂತ್ರವಿತ್ತು,
ಸತ್ತ ಸೈನಿಕನ ನೆನಪಿತ್ತು,
ಊರ ಅರಸನಿಗೆ ಶಾಪವಿತ್ತು.

ಕಣ್ಣಿಗೆ ಕತ್ತಲು ಕವಿದಂತಾಗಿ ಅರಸ
ಚಿಂತೆಗೊಳಗಾದ
ಹಾಡೊಳಗೆ ಶಾಪಗ್ರಸ್ತನಾಗಿದ್ದ ಕಂಡು
ಆಘಾತದಿಂದ ಕುಸಿದು ಕುಳಿತ.
ಇದೊಂದು ವಿಚಿತ್ರ;
ಮುದುಕಿಯ ಹಾಡೊಳಗೆ ನೆಲೆಪಡೆವುದು
ಮಹಾಕಾವ್ಯದೊಳಗೆ ನೆಲೆಪಡೆದಷ್ಟು ಸುಲಭವಲ್ಲ!